## ಗಮನ ಸೆಳೆದ ಲೇಖನ




2018ರಲ್ಲಿ ಬಿಡುಗಡೆಯಾದ ಚಿತ್ರಗಳ ಯಶಸ್ಸು, ವೈಫಲ್ಯಗಳ ಅವಲೋಕನ ತುಂಬಾ ಗಮನಾರ್ಹವಾಗಿದೆ.

ಕಳೆದ 2018ರಲ್ಲಿ ಸರಿ ಸುಮಾರು ಇನ್ನೂರು ನಲವತ್ತಕ್ಕೂ ಹೆಚ್ಚಿನ ಚಲನಚಿತ್ರಗಳು ಬಿಡುಗಡೆ ಆಗಿವೆ. ಅದರಲ್ಲಿ ಗಟ್ಟಿಕಾಳು ಎಷ್ಟು? ಜೊಳ್ಳು ಕಾಳೆಷ್ಟು? ಎಂದು ನೋಡಿದರೆ ಅಂದಾಜು ಎರಡನೂರು ಸಿನಿಮಾಗಳು ಮಕಾಡೆ ಮಲಗಿವೆ. ಇನ್ನೊಂದು ಭಯಾನಕ ಸಂಗತಿ ಎಂದರೆ ಒಂದೇ ವಾರದಲ್ಲಿ 11 ಸಿನಿಮಾಗಳ ತನಕ ಬಿಡುಗಡೆಯಾಗಿ ಅತಿವೃಷ್ಟಿಯನ್ನು ನಿರ್ಮಾಣಮಾಡಿದೆ. ಇದೇ ವರ್ಷದಲ್ಲಿ ಕೇವಲ ಬೆರಳೆಣಿಕೆಯಷ್ಟು ಸಿನಿಮಾಗಳು ಮಾತ್ರ ಯಶಸ್ವಿಯಾಗಿವೆ.

ಚಿತ್ರದುರ್ಗದ 'ಜಲೀಲ' ಅಂಬರೀಶ್ ಇಲ್ಲ. ಅದು ಕನ್ನಡ ಚಿತ್ರರಂಗಕ್ಕೆ ದೊಡ್ಡ ನಷ್ಟವೇ ಸರಿ.

—ಶಿವಕುಮಾರ.ಕೊ. ಬಣಗಾರ, ಬಾಗಲಕೋಟೆ,
ಎಚ್. ಆನಂದ್ ಕುಮಾರ್, ಚಿತ್ರದುರ್ಗ

## ಮನಕಲಕಿದ ವಿಚಾರ

ವಿಚಾರ ಲಹರಿಯ 'ಹಿಡಿಯಲಾಗದ ಪೊರೆಯಲಾಗದ ಹೆಣ್ಣು' ಹೆಣ್ಣಿಗೆ ಸಮಾಜದಲ್ಲಿ ಇರುವ ಸ್ಥಾನವನ್ನು 'ಭಾಗೀರಥಿ'ಯ ಮೂಲಕ ಜ್ಞಾಪಿಸಿದ್ದಕ್ಕೆ ಧನ್ಯವಾದಗಳು. 'ಕೆರೆಗೆ ಹಾರ' ಮನಸ್ಸಿನಲ್ಲಿ ಸಂಕಟವನ್ನು ಉಕ್ಕಿಸುವ ಕಾವ್ಯ.

—ಮಹಾವೀರ ಕಾಸರ, ಶಿವಮೊಗ್ಗ, ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ

## ಪರಿಶೀಲನಾರ್ಹ

'ನಿಮ್ಮೊಡನೆ'ಯಲ್ಲಿ ಉದಯಕುಮಾರ್ ಅವರ 'ಕೌಶಲ್ಯದ ಕೊರತೆಗೆ ವಿದ್ಯಾರ್ಥಿಗಳಷ್ಟೇ ಕಾರಣರಲ್ಲ' ಉಪಯುಕ್ತ ವಿವರಗಳಿಂದ ಕೂಡಿತ್ತು. ಚಿಂತನಾರ್ಹ ಬರಹ.

—ನಾ.ಕು. ಗಣೇಶ್, ಬೆಂಗಳೂರು

## ಉಪಯುಕ್ತ ಸಲಹೆ

ಕೊಬ್ಬು ನಿವಾರಣೆಗೆ ಕೂಲ್ ಫ್ರೀಜಿಂಗ್ (ಉಮಾ ಅನಂತ) ಉಪಯುಕ್ತ ಸಲಹೆಗಳ ಲೇಖನ. ಬೊಜ್ಜು, ಕೊಬ್ಬು, ಉಳ್ಳವರೆಲ್ಲ ಓದಲೇಬೇಕಾದ ಲೇಖನ.

—ರತ್ನಾಕರ ಹೆಗಡೆ ಕಟ್ಟೆ, ಮೂಡುಬಿದರೆ

## ಶ್ಲಾಘನೀಯ

'ಕುಬೇರ ನುಜ್ಜಗಿ' ಅವರ ಲೇಖನ ಓದಿ ಆನಂದವಾಯಿತು. ಹೇಗಾದರೂ ಸಾಲು ಮರದ ತಿಮ್ಮಕ್ಕ ಎಂಬ ಹಸಿರು ದೇವತೆಯ ಹೆಸರು ಚಿರಸ್ಥಾಯಿಯಾಗಲಿ. ಅರಣ್ಯ ಇಲಾಖೆಯವರ ಕೆಲಸ ಶ್ಲಾಘನೀಯ.

—ಸುಲೋಚನಾ ವಾದಿರಾಜ್, ಹೊಳೆಬೆನ್ನೂರು

## ಅರ್ಥಗರ್ಭಿತ ಪ್ರಬಂಧ

ಈರಪ್ಪ ಎಂ. ಕಂಬಳಿಯವರ 'ಮುಕ್ಕಾಗದ ಕುಡಿಕೆ' ಪ್ರಬಂಧ ಮನಕೆ ಮುದ ನೀಡಿತು. ಐದಾರು ದಶಕಗಳ ಹಿಂದಿನ ತಮ್ಮ ಸೋದರತ್ತೆ ಬಾಲ ವಿಧವೆ ಹನುಮಕ್ಕಳ ಬದುಕು, ಹದಗೆಡದ ಸಂಭ್ರಮ, ಸ್ಥಿತಪ್ರಜ್ಞೆ, ಆಪ್ತವಾಗಿ ಓದುಗರ ಅಂತಃಕರಣವನ್ನು ಆವರಿಸಿಕೊಳ್ಳುತ್ತದೆ.

— ಮೋಹನ.ರು. ಹಣಗಿ, ಅಮೀನಗಡ,
ರಾಜಶೇಖರ ಹಾದಿಮನಿ, ಧಾರವಾಡ

## ಹೃದಯ ಸ್ಪರ್ಶಿ ಕಥೆ

'ಇಂದ್ರಾಮಾಲ್' ಕಥೆ ಹೃದಯಸ್ಪರ್ಶಿ. ಟೈಲರ್ ರಾಮಯ್ಯ ಕಾಣೆಯಾದದ್ದು ಬೇಸರವಾಯಿತು. ಬಹುಶಃ ಕೊಲೆ ಆಗಿರಬಹುದು. ಈ ರೀತಿ ಸಮಸ್ಯೆ ಬಂದಾಗ ಜಾಗವನ್ನು ಮಾರಾಟ ಮಾಡಿ ಬೇರೆ ಕಡೆ ಜೀವಿಸಿದರೆ, ಪ್ರಾಣವನ್ನೂ ರಕ್ಷಿಸಿಕೊಂಡು ಸುಖವಾಗಿಯೂ ಇರಬಹುದು.

—ಎ.ಪಿ. ರಂಗನಾಥ, ಮೈಸೂರು,
ಕೊಹಿಮ, ಬಸರಕೋಡು

## ಉಪಯುಕ್ತ ಮಾಹಿತಿ

'ಫಿಟ್‌ನೆಸ್' ಶೀರ್ಷಿಕೆಯಲ್ಲಿದ್ದ 'ನೆಲ ಮೂಲದ ಆಹಾರ ಸೇವಿಸಿ' (ರಾಘವೇಂದ್ರ. ಕೆ.) ಉಪಯುಕ್ತ ಲೇಖನ. ಬಹುತೇಕ ರೋಗಗಳನ್ನು ಗುಣ ಮಟ್ಟದ ಆಹಾರ ಪದ್ಧತಿಯಿಂದಲೇ ನಿಯಂತ್ರಿಸಬಹುದು.

—ವಿ.ಹೇಮಂತಕುಮಾರ್, ಬೆಂಗಳೂರು
ನಾರಾಯಣ ಯಾಜಿ ಶಿರಾಲಿ

## ಕಾವಿ ಕಲೆಗೆ ಮರುಜೀವ

ಕಾವಿಕಲೆ ಆಕರ್ಷಣೆಯ ಸೆಲೆ!' (ಬಳಕೂರು ವಿ.ಎಸ್. ನಾಯಕ) ಲೇಖನದಲ್ಲಿ ವೀಣಾ ಶ್ರೀನಿವಾಸ್ ಅವರ ಪರಿಶ್ರಮ, ಈ ಕಲೆಯನ್ನು ಉಳಿಸಿ, ಬೆಳೆಸುವುದು ಮೆಚ್ಚುವ ಅಂಶ.

—ಸುಂದರ್ ಬೆಂಗಳೂರು, ಪಿ. ಜಯವಂತ ಪೈ,
ಕುಂದಾಪುರ, ಟಿ.ಎಂ. ಮಾನಪ್ಪ ಶಿವಮೊಗ್ಗ

## ಕಾರ್ ಕಾರ್ ಕಾರ್

ವಾಹನಗಳನ್ನು ಕಲೆ ಹಾಕಿ ಮ್ಯೂಸಿಯಂ ಮೂಲಕ ಪ್ರವಾಸಿಗಳನ್ನು ಸೆಳೆಯುತ್ತಿರುವ ಸುಧಾಕರ ಹಳೆಯ ವಸ್ತುಗಳಲ್ಲಿಯೇ ಹೊಸತನ್ನು ಸೃಷ್ಟಿಸಿ ಪವಾಡ ಮಾಡಿದ್ದಾರೆ. ಪ್ರಕಾಶ ಮನ್ನಂಗಿಯವರ ಲೇಖನ ಹೊಸಲೋಕ ಸೃಷ್ಟಿಸಿದೆ.

—ಕೋಟೇಶ್ವರ ಸೂರ್ಯನಾರಾಯಣ ರಾವ್

## ಸ್ವಚ್ಛ ಹವಳ ದ್ವೀಪ

'ಜಾಲಿ ಬಾಯ್' ಕನ್ನಡಿಯಲ್ಲಿ ಹವಳದ ಬಿಂಬಗಳು! ಬರಹದಲ್ಲಿ (ಕೆ.ಎಸ್. ರವಿಕುಮಾರ್) ಅಂಡಮಾನ್‌ನ 'ಜಾಲಿ ಬಾಯ್' ಎಂಬ ಪರಿಶುದ್ಧ ಸಮುದ್ರ ತೀರ ಹೊಂದಿರುವ ಹವಳದ ದ್ವೀಪದ ಸೌಂದರ್ಯ, ಸ್ವಚ್ಛತೆ, ಅಲ್ಲಿನ ಜೀವ ವೈವಿಧ್ಯಗಳ ಕುರಿತು ಚೆನ್ನಾಗಿ ವರ್ಣಿಸಿದ್ದಾರೆ ಮತ್ತು ಅಲ್ಲಿಗೆ ಪ್ರವಾಸ ಹೋಗುವವರಿಗೆ ಅಗತ್ಯ ಮಾಹಿತಿಯನ್ನು ಒದಗಿಸಿದ್ದಾರೆ.

—ಬಿ. ಮನೋಹರ, ಚಳ್ಳಕೆರೆ

